ಅಧ್ಯಾಪಕರು, ವಿಮರ್ಶಕರು ಕೆಲವರಾದರೂ ಇದ್ದಾರೆ. ಕರ್ನಾಟಕದ ಮೂಲೆಮೂಲೆಗಳಲ್ಲಿ ಇದ್ದಾರೆ. ವಿಶ್ವವಿದ್ಯಾಲಯಗಳ ಆಚೆಗೂ ಇದ್ದಾರೆ. ಇಂತಹವರು ಮೆಚ್ಚುವ, ಸರಿಪಡಿಸುವ ಕೆಲಸಗಳನ್ನು ಮಾಡುತ್ತಾರೆ. ಅದು ನಿಜವಾಗಿಯೂ ಕೀರ್ತಿಯನ್ನೋ ಪ್ರಶಸ್ತಿಯನ್ನೋ ಅಕಾಡೆಮಿಗಳ ಸದಸ್ಯತ್ವವನ್ನೋ ಕೊಡಿಸಿ ಕೊಲ್ಲುವ ವಿದ್ಯಮಾನವಲ್ಲ. ಹಾಗೆ ಮಾಡುವ 'ಗಾಡ್ ಫಾದರ್'ಗಳು ನಿಜಕ್ಕೂ ಯುವಪೀಳಿಗೆಯ ಶತ್ರುಗಳು.

ವೈಯಕ್ತಿಕವಾಗಿ ನಾನು ಯಾರ ಬಗ್ಗೆ ಬರೆಯುತ್ತೇನೆ, ಯಾವ ಕೃತಿಗಳನ್ನು ಆರಿಸಿಕೊಳ್ಳುತ್ತೇನೆ ಯಾವ ಮಾನದಂಡಗಳನ್ನು ಬಳಸುತ್ತೇನೆ ಎಂದು ಹೇಳುವುದು ಅಷ್ಟು ಮುಖ್ಯವಲ್ಲ. ನನ್ನ ವಿಧಾನಗಳಿಗೆ ನನ್ನ ಬರವಣಿಗೆಯೇ ಸಾಕ್ಷಿ. ಆದರೆ, ನನ್ನ ಪೀಳಿಗೆಯ ವಿಮರ್ಶಕರು ಎದುರಿಸಿದ ಕೆಲವು ವಿಶಿಷ್ಟ ಸಮಸ್ಯೆಗಳನ್ನು ಇಲ್ಲಿ ಹೆಸರಿಸುವುದು ಉಪಯುಕ್ತವೆಂದು ನನಗೆ ತೋರುತ್ತದೆ. ತಿಳಿದೋ ತಿಳಿಯದೆಯೋ ನಾವು ಸೆಮಿನಾರ್ ಸಂಸ್ಕೃತಿಯ 'ಬಲಿಪಶು'ಗಳಾಗಿದ್ದೆವು, ಆಗಿದ್ದೇವೆ. ನನ್ನ ಗುರುಗಳಾದ ಜಿ.ಎಸ್. ಶಿವರುದ್ರಪ್ಪನವರು ಆ ನೆಲೆಯಲ್ಲಿ ಅತ್ಯುತ್ತಮವಾದ ಕೆಲಸ ಮಾಡಿದರು. ಅವರದು ಸಾಹಿತ್ಯವಿಮರ್ಶೆಯು ಒಟ್ಟು 'ಸಮುದಾಯದ ಹುಡುಕಾಟ' (ಕಾಮನ್ ಪರ್ಸ್ಯೂಟ್) ಎಂಬ ಮಾತಿಗೆ ಸಾಕ್ಷಿಯಾಯಿತು. ಪಂಪ, ಕುವೆಂಪು, ಬೇಂದ್ರೆ, ಕಾರಂತ ಮುಂತಾದವರ ಬಗ್ಗೆ ಅವರು ಮಾಡಿದ ಕೆಲಸವು 'ಇಡಿ', 'ಬಿಡಿ'ಗಳ ಅತ್ಯುತ್ತಮ ಸಂಯೋಜನೆಯಾಗಿತ್ತು. ಕ್ರಮೇಣ ಹಾದಿಗೊಂದು ಬೀದಿಗೊಂದು, ವಾರಕ್ಕೊಂದು, ತಿಂಗಳಿಗೆರಡು ಸೆಮಿನಾರುಗಳಾಗಿ, ಪ್ರಬಂಧಮಂಡನೆಯ ಜಾಗದಲ್ಲಿ 'ಉಡಾಫೆ ಉಪನ್ಯಾಸ'ಗಳು ಬಂದು, ಅವು ಪುಸ್ತಕರೂಪದಲ್ಲಿ ಪ್ರಕಟವಾಗುವುದು ಅಪರೂಪವಾಗಿ ಅದೇ ಅದೇ ಮುಖಗಳು ಭಾಷಣ ಮಾಡಿ ಮಾಡಿ ಕೇಳುಗರನ್ನು ಓದಿನಿಂದ ವಿಮುಖರಾಗಿ ಮಾಡಿದೆವೇನೋ! ಇಂತಹ ಸೆಮಿನಾರುಗಳು ಸಾಮಾನ್ಯವಾಗಿ ಕಿರಿಯ ಪೀಳಿಗೆಯ ಬಗ್ಗೆ ಇರುವುದಿಲ್ಲ. ಅಲ್ಲಿ ಸಾಹಿತ್ಯಕ ಆಶಯಗಳು ಮತ್ತು ಹಿರಿಯ ಲೇಖಕರು ಮುಖ್ಯರಾಗುತ್ತಾರೆ. ಪತ್ರಿಕೆಗಳಲ್ಲಿ ಪುಸ್ತಕವಿಮರ್ಶೆ/ಪರಿಚಯ/ಅಂಕಣ ಬರೆಯುವ ಕೆಲವು ಗೆಳೆಯರು ಕೂಡ ತಮಗೆ ಮುಖ್ಯವೆನಿಸಿದ ಹಿರಿಯ ಲೇಖಕರ ಬಗ್ಗೆಯೇ ಬರೆದರು. ಆದ್ದರಿಂದ ಕಿರಿಯರ ಕೃತಿಗಳ ಬಗ್ಗೆ ಬರೆಯಲು ಮುನ್ನುಡಿ, ಬೆನ್ನುಡಿ ಮತ್ತು ಪುಸ್ತಕ ಬಿಡುಗಡೆ ಸಮಾರಂಭಗಳು ಮಾತ್ರ ವೇದಿಕೆಗಳಾದವು. ಅಲ್ಲಿಯೂ ಮುನ್ನುಡಿ ಕೇಳಿದವರ ಬಗ್ಗೆ ಬರೆದೆವು, ಕೇಳದ 'ಅಭಿಮಾನಿ'ಗಳ ಬಗ್ಗೆ ಬರೆಯಲೇ ಇಲ್ಲ. ಇದರಿಂದ ಹಲವು ಯುವ ಲೇಖಕರ ಬರವಣಿಗೆಯು ನಮ್ಮಲ್ಲಿ ಕೆಲವರ ಓದಿನಿಂದ ಹೊರಗೆ ಉಳಿಯಿತೇನೋ. ಈ ಮಾತು 'ನವ್ಯ' ವಿಮರ್ಶಕರಿಗೂ ಅನ್ವಯಿಸುತ್ತದೆ. ದಲಿತ, ಬಂಡಾಯ, ಅನಂತರದ್ದು, ಹೆಣ್ಣುಮಕ್ಕಳ ಬರವಣಿಗೆ ಎಲ್ಲವೂ ಅವರ ಓದಿನ ವಲಯದೊಳಗೆ ಬಹುಮಟ್ಟಿಗೆ ನುಸುಳಲಿಲ್ಲ.... ನಿಷ್ಠುರತೆ ಮತ್ತು ಪ್ರೋತ್ಸಾಹಗಳ ಜೊತೆಗೆ ಸರಿಯಾದ ಮಾದರಿಗಳನ್ನು ಒದಗಿಸುವ ಮೂಲಕ, ಲಂಕೇಶ್ ಒಬ್ಬರು ಮಾತ್ರ ಹಲವು ತರುಣ ಲೇಖಕ, ಲೇಖಕಿಯರನ್ನು ಬೆಳೆಸಿದರು. ತನ್ನದೇ ಆದ ರೀತಿಯಲ್ಲಿ ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ ಕೂಡ ಇದೇ ಕೆಲಸವನ್ನು ತನ್ನದೇ ಆದ ರೀತಿಯಲ್ಲಿ ಮಾಡಿತು.

ನನಗೆ ಓದು ಮುಖ್ಯ, ಬರವಣಿಗೆ ಗೌಣ. ಒಂಬತ್ತು ಪುಸ್ತಕ ಓದಿದ ಬಳಿಕವೇ ಒಂದು ಪುಸ್ತಕದ ಬಗ್ಗೆ ಬರೆಯಬೇಕು. ಕೇವಲ ಕನ್ನಡ ಪುಸ್ತಕಗಳನ್ನು ಓದುವುದು ಅಥವಾ ಕೇವಲ ಸಾಹಿತ್ಯವನ್ನು ಓದುವುದು ನನಗೆ ಸಮ್ಮತವಲ್ಲ. ವಿಜ್ಞಾನದಿಂದ ಹಿಡಿದು ಚಿತ್ರಕಲೆಯವರೆಗೆ, ಆಟಗಳಿಂದ ಮೊದಲಾಗಿ ರಾಜಕೀಯದವರೆಗೆ ನಮಗೆ ಆಸಕ್ತಿ ಇರಬೇಕು. ನಾವು ನಮ್ಮ ಕಣ್ಣುಗಳಿಂದ ನೋಡುವ ಹಾಗೆಯೇ ಅನ್ಯರ ಕಣ್ಣುಗಳಿಂದಲೂ ನೋಡುವುದು ಸಾಧ್ಯವಾಗಬೇಕು. ಓದು ವಿಮರ್ಶೆಗಳಲ್ಲಿ ಬುದ್ಧಿ, ಭಾವನೆ, ಕಲೆಯನ್ನು ಗುರುತಿಸುವ ವಿಶಿಷ್ಟ ಸಂವೇದನೆ ಇರಬೇಕು. ಸಾಹಿತ್ಯಕ ಕೃತಿಗಳ ವೈವಿಧ್ಯ ಮತ್ತು ಬದಲಾವಣೆಗಳನ್ನು ಗುರುತಿಸಲು ನಮಗೆ ಸಾಧ್ಯವಾಗಬೇಕು. ಓದುಗರ, ಕೇಳುಗರ ಹಿನ್ನೆಲೆಯು